ಶ್ರೀ ಯು.ಆರ್. ಸಭಾಪತಿ :— ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ನಾನು ಸಂಪೂರ್ಣ ವಿರೋಧಿಸಿ, ರಾಜ್ಯ ಸರ್ಕಾರ ಇನಷ್ಟು ಎಚ್ಚರಿಕೆಯಿಂದ ನಡೆಯಲಿ ಎಂದು ಹಾರೈಸಿ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು :— ಈ ದಿವಸ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ದಿನಾಂಕ: 27-3-99 ಶನಿವಾರದ ಅಧಿವೇಶನದಂದು ತೆಗೆದುಕೊಳ್ಳಲಾಗುವುದು.

ಶ್ರೀ ಎಚ್.ಎನ್. ನಂಜೇಗೌಡ :— ಅಧ್ಯಕ್ಷರೇ, ನಾನೊಬ್ಬ ಅನ್‌ಅಟಾಚ್ಡ್ ಸದಸ್ಯ ನಿಮಗೇ ಅಟಾಚ್ಡ್. ನನಗೆ ಕೆಲಸಗಳಿವೆ, ನಾಡಿದ್ದು ಒಂದು ಸಮಾವೇಶ ಕರೆದಿದ್ದೇನೆ. ಇವತ್ತೇ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು :— ಆಗಬಹುದು.

+ ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲೆ ವಂದಾನಾ ನಿರ್ಣಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ತಮಗೆ ಮೊಟ್ಟಮೊದಲನೆಯದಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ಈಗಿನ ಭಾಷಣ ಇದು ತುಂಬಾ ಮಹತ್ವ ಪಡೆದಿದೆ ಎಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ವಿಧಾನಮಂಡಲದಲ್ಲಿ ರಾಜ್ಯಪಾಲರ ಭಾಷಣ ಇದು ಕೊನೆಯ ಭಾಷಣ. ಕಳೆದ ನಾಲ್ಕೂವರೆ ವರ್ಷಗಳಿಂದ ಅನೇಕ ಭಾಷಣಗಳನ್ನು ರಾಜ್ಯಪಾಲರು ಮಾಡಿದ್ದಾರೆ. ಆ ನಾಲ್ಕು ಭಾಷಣದ ಪ್ರತಿ ಕೂಡ ನನ್ನ ಹತ್ತಿರ ಇದೊ. ಜೊತೆಗೆ ಹಿಂದಿನ ಈ ಸರ್ಕಾರದ ಸಾಧನೆಗಳೇನು, ಬರುವ ದಿನಗಳಲ್ಲಿ ಈ ಸರ್ಕಾರ ಏನು ಸಾಧನೆ ಮಾಡುತ್ತದೆ ಎನ್ನುವ ಅಂಶವನ್ನು ಕೂಡ ರಾಜ್ಯಪಾಲರು ಈ ಭಾಷಣದ ಸಂಬಂಧದಲ್ಲಿ ಪ್ರಸ್ತಾಪ ಮಾಡಬೇಕೆಂದು ನನಗೆ ಅನಿಸುತ್ತದೆ. ಏತಕ್ಕೆಂದರೆ ಕಳೆದ ವಿಧಾನಸಭಾ ಚುನಾವಣೆಗೆ ಮುಂದೆ ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಈ ರಾಜ್ಯದಲ್ಲಿ ಜನತೆಯ ಮುಂದೆ ಹೋಗಿ ನಮ್ಮ ನಮ್ಮ ಚುನಾವಣಾ ಪ್ರಣಾಳಿಕೆಯನ್ನು ನಾವು ಇಟ್ಟಿವು. ಈ ರಾಜ್ಯದ ಜನ ಜನತಾದಳವನ್ನು ಆರಿಸಿತು. ಈ ರಾಜ್ಯದ ಹಿತವನ್ನು ನೀವು ಕಾಪಾಡಿ, ಈ ರಾಜ್ಯದ ಸರ್ವ ಉನ್ನತಿಯನ್ನು ನೀವು ಮಾಡಬೇಕೆಂದು ಹೇಳಿ ಆಶಿರ್ವಾದ ಮಾಡಿದರು. ಅವರ ಪ್ರಣಾಳಿಕೆಯಲ್ಲಿ 94ರಲ್ಲಿ ಇಟ್ಟಂಥ ಒಂದು ಆಕರ್ಷಣೀಯವಾದ ಘೋಷಣೆ ಎಂದರೆ ಸ್ವಾಭಿಮಾನ, ಸಮೃದ್ಧ ಕರ್ನಾಟಕಕ್ಕಾಗಿ. ಎಂದು ಹೇಳಿದ್ದ ಚುನಾವಣಾ ಪ್ರಣಾಳಿಕೆ ಕೂಡ ಇದೆ. ಜೊತೆಗೆ ಕೆಲವು ವಿವರಣೆಯನ್ನು